ಶ್ರೀ ಹೆಚ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಹಿಂದಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರು ರಚನೆ ಮಾಡಿದರು. ಈಗಿನ ಮಾನ್ಯ ಮುಖ್ಯಮಂತ್ರಿಗಳು ಆ ಮಂಡಳಿಗೆ ಸ್ವಾಯತ್ತ ಅಧಿಕಾರವನ್ನು ಕೊಟ್ಟಿರುವುದು ಬಹಳ ಸ್ತುತ್ಯಾರ್ಹವಾದ ಕಾರ್ಯಕ್ರಮ. ಆದರೆ, ಮಲತಾಯಿ ಧೋರಣೆಯನ್ನು ಇಲ್ಲಿ ಅನುಸರಿಸಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. 1989-90ನೇ ಸಾಲಿನಲ್ಲಿ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಬಿಡುಗಡೆಯಾದ ಹಣದಲ್ಲಿ ಸಂಪೂರ್ಣವಾಗಿ ಮೂರು ಜಿಲ್ಲೆಗಳಲ್ಲಿ ಒಂದು ದೂರು ಬಿಟ್ಟು, ಕೇವಲ ಗುಲ್ಬರ್ಗ ಡೆವಲಪ್‌ಮೆಂಟ್ ಬೋರ್ಡ್ ಎನ್ನತಕ್ಕಂಥ ರೀತಿಯಲ್ಲಿ ಅನುದಾನ ಖರ್ಚಾಗುತ್ತಿರುವುದು ಗೊತ್ತಾಗುತ್ತಿದೆ. ಈ ಒಂದು ಸ್ವಾಯತ್ತ ಮಂಡಳಿಗೆ ಒಬ್ಬ ಅಧಿಕಾರೇತರ ಅಧ್ಯಕ್ಷರನ್ನು ಮತ್ತು ಅಧಿಕಾರೇತರ ಸದಸ್ಯರನ್ನು ನೇಮಕ ಮಾಡಿದರೆ ಯಾವುದೇ ಕೆಲಸ ಕಾರ್ಯಗಳನ್ನು ಬದಲಾವಣೆ ಮಾಡುವುದಕ್ಕೆ ಅಂದರೆ ರಸ್ತೆ ಕಾಮಗಾರಿಗಳು ಯಾವುದೇ ಆಗಿರಲಿ, ಅವುಗಳನ್ನು ಸರಿಯಾಗಿ ಬದಲಾವಣೆ ಮಾಡಬೇಕೆಂದು ಇಚ್ಛಿಪಟ್ಟಾಗ ಅದು ಹೈ ಪವರ್ ಕಮಿಟಿ ಮುಂದೆ ಬರಬೇಕು. ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ಇದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗಾಗಿ ಹಣವೆಲ್ಲವೂ ಲ್ಯಾಪ್ಸ್ ಆಗತಕ್ಕಂಥ ಪರಿಸ್ಥಿತಿ ಇದೆ. ಆದುದರಿಂದ, ದಯವಿಟ್ಟು, ಈ ಒಂದು ಸ್ವಾಯತ್ತ ಮಂಡಳಿಗೆ ಒಬ್ಬ ಅಧಿಕಾರೇತರ ಅಧ್ಯಕ್ಷರನ್ನು ಮತ್ತು ಒಬ್ಬ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡಿ, ಈ ಒಂದು ಪ್ರಾದೇಶಿಕ ಮಟ್ಟದ ಅಸಮತೋಲನವನ್ನು ನಿವಾರಿಸುವಲ್ಲಿ ಕ್ರಮ ಕೈಗೊಳ್ಳಬೇಕೆಂದು ತಮ್ಮನ್ನು ಆಗ್ರಹಪೂರ್ವಕವಾಗಿ ವಿನಂತಿಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- ಅಧ್ಯಕ್ಷರೆ, ಅದು ಈಗ ತಾನೆ ಮಾನ್ಯ ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆದುಕೊಂಡು ಬಂದಿದೆ. ಜೇರ್‌ಮನ್ ಮಾಡುವುದರ ಬಗ್ಗೆ ನಾವು ಈಗ ನಿಗಾ ತೆಗೆದುಕೊಂಡಿದ್ದೇವೆ. ಆದನ್ನು ಈ ಕೂಡಲೆ ಮಾಡಿಕೊಡುತ್ತೇವೆ.

ಜಿಲ್ಲಾ ಕೇಂದ್ರಗಳಲ್ಲಿ ಧ್ವಜಾರೋಹಣ

105(806). ಶ್ರೀಮಂಜುನಾಥ ಸಿ ಕುನ್ನೂರು (ಶಿಗ್ಗಾಂವ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧ್ವಜ ಸಂಹಿತೆಯ ಪ್ರಕಾರ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಧ್ವಜಾರೋಹಣ ಯಾರು ಮಾಡಬೇಕಾಗುವುದು?

ಆ) ಈ ಬಗ್ಗೆ ಧ್ವಜ ಸಂಹಿತೆಯಲ್ಲಿ ಧ್ವಜಾರೋಹಣ ಕಾನೂನು ಅಡಿ ಕಾಯ್ದೆಯನ್ನು ಸಾರ್ವಜನಿಕ ಪ್ರತಿನಿಧಿಗಳಿಂದ ಧ್ವಜಾರೋಹಣ ಮಾಡುವಂತೆ ಸೂಕ್ತ ತಿದ್ದುಪಡಿ ಮಾಡಿ ಆದೇಶ ಹೊರಡಿಸಲಾಗುವುದೇ?

ಮುಖ್ಯ ಮಂತ್ರಿಗಳ ಪರವಾಗಿ ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಭಕಾರಿ ಸಚಿವರು):-

ಅ) ಧ್ವಜ ಸಂಹಿತೆಯ ನಿಯಮಗಳನುಸಾರ ಕೇಂದ್ರ ಸರ್ಕಾರದವರು ನೀಡಿದ ಸ್ಪಷ್ಟೀಕರಣದನ್ವಯ ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಅಲ್ಲಿಯ ಹಿರಿಯ ಸರ್ಕಾರದ ಪ್ರತಿನಿಧಿ ಅಂದರೆ ಗೌರ್ನರ್, ಮುಖ್ಯ ಮಂತ್ರಿಗಳು, ಸಚಿವರು, ಕಮೀಷನರ್, ಜಿಲ್ಲಾಧಿಕಾರಿಗಳು, ಕಲೆಕ್ಟರ್, ತಹಶೀಲ್ದಾರ್ ಇವರಲ್ಲಿ ಯಾರಾದರೂ ರಾಷ್ಟ್ರೀಯ ಹಬ್ಬಗಳಂದು ಧ್ವಜಾರೋಹಣ ಮಾಡಬಹುದು.

ಆ) ಧ್ವಜ ಸಂಹಿತೆಯ ತಿದ್ದುಪಡಿ ಮಾಡಲು ಭಾರತ ಸರ್ಕಾರದವರು ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಮಂಜುನಾಥ ಸಿ. ಕುನ್ನೂರು:- ಸಾಮಾನ್ಯ ಅಧ್ಯಕ್ಷರೆ, ಧ್ವಜ ಸಂಹಿತೆಯ ನಿಯಮಾವಳಿಯ ಪ್ರಕಾರ ತಾಲ್ಲೂಕು ಮತ್ತು ಜಿಲ್ಲಾ ಮುಖ್ಯ ಕೇಂದ್ರಗಳಲ್ಲಿ ಧ್ವಜಾರೋಹಣವನ್ನು ಯಾರು ಮಾಡಬೇಕಾಗುವುದೆಂದು ಕೇಳಲಾದ ಪ್ರಶ್ನೆಗೆ ಉತ್ತರವಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸೀನಿಯರ್ ಪಬ್ಲಿಕ್ ರೆಪ್ರಸೆಂಟೇಟೀವ್ ಅಂದರೆ ತಹಶೀಲ್ದಾರರು ಮತ್ತು ಕಲೆಕ್ಟರ್‌ಗಳು ಕಾನೂನಡಿಯಲ್ಲಿ ಧ್ವಜಾರೋಹಣವನ್ನು ಮಾಡಬೇಕಾಗುವುದೆಂದು ತಿಳಿಸಿದ್ದಾರೆ. ಆದರೆ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಇವತ್ತು ತಾಲ್ಲೂಕು ಮುಖ್ಯ ಕೇಂದ್ರಗಳಿರಬಹುದು ಅಥವಾ ಜಿಲ್ಲಾ ಮುಖ್ಯ ಕೇಂದ್ರಗಳಿರಬಹುದು, ಅಲ್ಲಿ ಕೆಲವು ಸಂಧರ್ಬಗಳಲ್ಲಿ ಮಂತ್ರಿಗಳು ಧ್ವಜಾರೋಹಣ ಮಾಡುತ್ತಿದ್ದಾರೆ. ಅದೇ ಪ್ರಕಾರವಾಗಿ ರಾಜ್ಯದಲ್ಲಿ ಮುಖ್ಯಮಂತ್ರಿಗಳು, ರಾಷ್ಟ್ರದಲ್ಲಿ ಪ್ರಧಾನ ಮಂತ್ರಿಗಳು ಧ್ವಜಾರೋಹಣವನ್ನು ಮಾಡುತ್ತಿದ್ದಾರೆ. ಆ

ಕಾರಣದಿಂದ ಈವತ್ತು ತಾಲ್ಲೂಕು ಮುಖ್ಯ ಕೇಂದ್ರಗಳಲ್ಲಿಯೂ ಕೂಡ ಪ್ರಜಾಪ್ರತಿನಿಧಿಗಳಾದಂಥ ಶಾಸಕರುಗಳು ಧ್ವಜಾರೋಹಣ ಮಾಡುವುದು ಅವಶ್ಯಕವಿದೆ ಎನ್ನತಕ್ಕಂಥ ವಿಚಾರದಿಂದ ಈ ಕಾನೂನನ್ನು ತಿದ್ದುಪಡಿ ಮಾಡುವುದು ಅತಿ ಅವಶ್ಯಕತೆ ಇದೆ ಎನ್ನತಕ್ಕ ಮಾತನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ಇದಕ್ಕೆ ಕಾನೂನನ್ನು ತಿದ್ದುಪಡಿ ಮಾಡುವ ಬಗ್ಗೆ ಮಾನ್ಯ ಸದಸ್ಯರ ಭಾವನೆ ಏನಿದೆ ಅದು ಕೇಂದ್ರ ಸರ್ಕಾರಕ್ಕೆ ಸಂಭಂದಪಟ್ಟಿದ್ದು.

ಶ್ರೀ ಮಂಜುನಾಥ ಸಿ. ಕುನ್ನೂರು:- ಸನ್ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಕಾನೂನಿನಡಿಯಲ್ಲಿ ಇದನ್ನು ತಿದ್ದುಪಡಿ ಮಾಡಬೇಕೆಂದು ಅವರು ಈಗಾಗಲೇ ಸ್ಪಷ್ಟೀಕರಣ ಮಾಡಿದ್ದಾರೆ. ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡತಕ್ಕಂಥಾದ್ದು ನಮ್ಮ ರಾಜ್ಯ ಸರ್ಕಾರದ ಒಂದು ಆದ್ಯ ಕರ್ತವ್ಯವಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂಧರ್ಬದಲ್ಲಿ ಸ್ಪಷ್ಟ ಪಡಿಸಬಯಸುತ್ತೇನೆ. ಉದಾಹರಣೆಗೆ ಹುಬ್ಬಳಿಯಲ್ಲಿನ ನೆಹರು ಮೈದಾನದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ಈವತ್ತಿನವರೆಗೂ ಕೂಡ ಜನರ ಪ್ರತಿನಿಧಿಗಳ ರಾಷ್ಟ್ರ ಧ್ವಜವನ್ನು ಹಾರಿಸುತ್ತಾ ಬಂದಿದ್ದರು. ಅದೇ ಪ್ರಕಾರ ಹಾನಗಲ್‌ನಲ್ಲಿಯೂ ಕೂಡ ಜನರ ಪ್ರತಿನಿಧಿಗಳು ಧ್ವಜವನ್ನು ಹಾರಿಸುತ್ತಾ ಬಂದಿದ್ದರು. ನನ್ನ ಕ್ಷೇತ್ರವಾದ ಶಿಗ್ಗಾಂವದಲ್ಲಿಯೂ ಅದೇ ರೀತಿ ಮಾಡುತ್ತಾ ಬಂದರು. ಸೀನಿಯರ್ ಪಬ್ಲಿಕ್ ರೆಪ್ರೆಜೆಂಟೇಟೀವ್ ಧ್ವಜವನ್ನು ಹಾರಿಸಬೇಕೆಂದು ಇದ್ದರೂ ಕೂಡ ಸಂಪ್ರದಾಯದ ಪ್ರಕಾರ custom is there and it prevails in rules and regulations. ಆದುದರಿಂದ ಈವತ್ತು ಇಂಥ ಸಂಧರ್ಬ ಬರುತ್ತಿರುವುದರಿಂದ, ದ್ವಂದ್ವ ವಿಚಾರಗಳು ಬರುತ್ತಿರುವುದರಿಂದ ಸರ್ಕಾರ, ತಹಶೀಲ್ದಾರರು, ಅಂದರೆ ನಮ್ಮ ಸರ್ಕಾರಿ ನೌಕರರು ಎನ್ನುವ ಒಂದು ವಿಚಾರ ಬರುತ್ತಿರುವಾಗ, ನಾವು ಈ ಪ್ರಜಾಪ್ರತಿನಿಧಿಗಳಿಗೆ ವಿಶೇಷವಾಗಿ ರಾಷ್ಟ್ರೀಯ ಹಬ್ಬಗಳಲ್ಲಿ ಧ್ವಜವನ್ನು ಹಾರಿಸಲಿಕ್ಕೆ ಅವಕಾಶವನ್ನು ಮಾಡಿಕೊಡತಕ್ಕ ಒಂದು ಸೂಕ್ತ ವ್ಯವಸ್ಥೆ ಮಾಡುವುದು ಸರ್ಕಾರದ ಅತಿ ಅವಶ್ಯಕವಾದ ಕರ್ತವ್ಯವಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂಧರ್ಬದಲ್ಲಿ ಹೇಳ ಬಯಸುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ಶಾಸಕರು ಅವರ ಅಭಿಪ್ರಾಯವನ್ನು ಹೇಳತಕ್ಕಂಥದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಅವರು ಕೂಡ ಜನರ ಪ್ರತಿನಿಧಿಯಾಗಿದ್ದಾರೆ. ಅವರ ಅಭಿಪ್ರಾಯದ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಕೇಳಿಕೊಳ್ಳಬೇಕಾಗುತ್ತದೆ ತಿದ್ದುಪಡಿ ಮಾಡುವ ಸಲುವಾಗಿ ನಾವು ಸಮಾಲೋಚನೆ ಮಾಡಬೇಕಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಸನ್ಮಾನ್ಯ ಅಧ್ಯಕ್ಷರೆ, ಅದರಲ್ಲಿ ರಾಜ್ಯಪಾಲರು ಮುಖ್ಯಮಂತ್ರಿಗಳು ಮತ್ತು ಸಚಿವರು ಎಂದು ಹೇಳಿದ್ದಾರೆ. ಈ ಮನೆಯ ವಿರೋಧ ಪಕ್ಷದ ನಾಯಕರು ಮೇಲ್ಮನೆಯ ವಿರೋಧ ಪಕ್ಷದ ನಾಯಕರು ಸಹಿತ ಸಚಿವರ ಸ್ಥಾನಮಾನಗಳನ್ನು ಹೊಂದಿದ್ದಾರೆ. ಇದರಲ್ಲಿ ಇವರುಗಳ ಬಗ್ಗೆ ಸರ್ಕಾರದವರು ವಿವರಣೆಯನ್ನು ಕೊಟ್ಟಿಲ್ಲ. ವಿರೋಧ ಪಕ್ಷದ ನಾಯಕರಿಗೆ ಈಗ ಇರತಕ್ಕ ಕಾನೂನಿನಲ್ಲಿ ಧ್ವಜಾರೋಹಣವನ್ನು ಮಾಡಲು ಅವಕಾಶವಿದೆಯೇ ಎನ್ನತಕ್ಕದನ್ನು ಮಾನ್ಯ ಮಂತ್ರಿಗಳಲ್ಲಿ, ಸರ್ಕಾರದಲ್ಲಿ ನಾನು ಕೇಳುತ್ತಿದ್ದೇನೆ. ಎರಡನೆಯದಾಗಿ, ಕೇಂದ್ರ ಸರ್ಕಾರದ ಧ್ವಜ ಸಂಹಿತೆಯ ತಿದ್ದುಪಡಿ ಆಗಬೇಕೆಂದು ಈಗಾಗಲೆ ಸಚಿವರು ಹೇಳಿದ್ದಾರೆ. ಅದಕ್ಕಾಗಿ ನಾನು ಕಳೆದ ಎರಡು ವರ್ಷಗಳಿಂದ ಒಂದು ರೆಸಲ್ಯುಷನ್‌ನನ್ನು ತಂದಿದ್ದೇನೆ. ಗ್ರಾನೈಟ್‌ನ ರೆಸಲ್ಯೂಷನ್ ಇರುವುದರಿಂದ ಅದಕ್ಕೆ ಅವಕಾಶಸಿಗದೆ ಮುಂದೆ ಬಂದಿದೆ. ಗ್ರಾನೈಟ್ ಬಗೆಗಿನ ಚರ್ಚೆ ಮುಂದುವರಿಯುತ್ತಿರುವುದರಿಂದ ಅದು ರೀಚ್ ಆಗಿಲ್ಲ.

ಅಧ್ಯಕ್ಷರು:- ಸರ್ಕಾರದವರು ಅದನ್ನು ಒಪ್ಪಿದ್ದಾರೆ. ಅದನ್ನು ಕೇಂದ್ರ ಸರ್ಕಾರಕ್ಕೆ ಒರೆದಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಅದಕ್ಕಾಗಿ ತಾಲ್ಲೂಕು ಕ್ಷೇತ್ರಗಳಲ್ಲಿ ಜನತಾ ಪ್ರತಿನಿಧಿಗಳಾದಂಥ ಶಾಸಕರು ಧ್ವಜಾರೋಹಣವನ್ನು ಮಾಡತಕ್ಕಂಥ ಒಂದು ನಿರ್ಣಯವನ್ನು ಈ ಸದನವು ಸರ್ವಾನುಮತದಿಂದ ಪಾಸ್‌ಮಾಡಿ ಕೇಂದ್ರ ಸರ್ಕಾರದ ಗೃಹಖಾತೆಗೆ ಕಳಿಸಿಕೊಡುವ ಪ್ರಯತ್ನ ಮಾಡುತ್ತೀರ?

ಅಧ್ಯಕ್ಷರು:- ಅದನ್ನು ಮೊದಲು ಪಾಸ್ ಮಾಡೋಣ. ಅದು ಪಾಸ್ ಆದಮೇಲೆ ಕೇಂದ್ರ ಸರ್ಕಾರದ ಗೃಹಖಾತೆಗೆ ಹೋಗುವುದು.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ಅಧ್ಯಕ್ಷರೆ, ಧ್ವಜಾರೋಹಣದ ಬಗ್ಗೆ ವಿರೋಧ ಪಕ್ಷದ ನಾಯಕರ ಸ್ಥಾನಮಾನದ ಬಗ್ಗೆ ವಿವರಣೆ ಕೊಡಲಿಲ್ಲ.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ತಮಗೆಲ್ಲಾ ಗೊತ್ತಿರುವ ಹಾಗೆ, ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಧ್ವಜಾರೋಹಣ ಮಾಡತಕ್ಕ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ, ಅದನ್ನು ತೀವ್ರವಾಗಿ ಮಾಡುತ್ತೇವೆ. ಎಕ್ಸಿಸ್ಟಿಂಗ್ ಇದರಲ್ಲಿ ಕೇಂದ್ರ ಸರ್ಕಾರದಿಂದ ಏನು ಸರ್ಕ್ಯುಲರ್ ಬಂದಿದೆ ಅದರ ಪ್ರಕಾರ ಈಗ ನಡೆಯುತ್ತಿದೆ. ಬೇರೆಯವರು ಎಂದರೆ ಜನರ ಪ್ರತಿನಿಧಿಗಳಾದ ಶಾಸಕರು ಮತ್ತು ವಿರೋಧ ಪಕ್ಷದ ನಾಯಕರು ಧ್ವಜಾರೋಹಣ ಮಾಡಬೇಕೆಂದು ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ಕೇಂದ್ರ ಸರ್ಕಾರದ ಒಂದು ತಿದ್ದುಪಡಿ ಬರುವವರಿಗೆ ಈ ರೀತಿ ಮಾಡಬೇಕು. ಇಲ್ಲಿಯತನಕ ಏನು ನಡೆದು ಬಂದಿದೆಯೆಂದರೆ, ತಹಶೀಲ್ದಾರರು ಧ್ವಜಾರೋಹಣ ಮಾಡುವಾಗ ಶಾಸಕರು ಪಕ್ಕದಲ್ಲಿ ಕುಳಿತುಕೊಳ್ಳಬೇಕು, ತಹಶೀಲ್ದಾರರು ಧ್ವಜಾರೋಹಣ ಮಾಡಿ ಪ್ರಜಾಪ್ರಭುತ್ವದ ಬಗ್ಗೆ ಭಾಷಣ ಮಾಡಬೇಕು ಎಂದು. ಇದು ಪ್ರಜಾಪ್ರಭುತ್ವಕ್ಕೆ ಅಪಮಾನ. ಆ ಕಾರಣ ಶಾಸಕರನ್ನು ಆ ಕಾರ್ಯಕ್ರಮಕ್ಕೆ ಆಮಂತ್ರಣ ಮಾಡಬಾರದು, ಶಾಸಕರನ್ನು ಪಕ್ಕದಲ್ಲಿ ಕೂರಿಸಿಕೊಂಡು ಪ್ರಜಾಪ್ರಭುತ್ವದ ಬಗ್ಗೆ ಭಾಷಣ ಮಾಡುವಂತಹ ಕಾರ್ಯಕ್ರಮ ಕೂಡ ನಡೆಯಬಾರದು. ಸರ್ಕಾರದವರು ಇದನ್ನಾದರೂ ಮಾಡುತ್ತೀರಾ?

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ಈ ಕಾರ್ಯಕ್ರಮ ಇವತ್ತಿನದಲ್ಲ, ಬಹಳ ದಿನಸಗಳಿಂದ ನಡೆದು ಬಂದಿದೆ. ಅದನ್ನು ನಾನು ಒಪ್ಪುತ್ತಿದ್ದೇನೆ. ಯಾವ ಪ್ರಕಾರ ಮಾಡಬೇಕು ಎಂದು ಅದನ್ನು ವಿಚಾರ ಮಾಡುತ್ತೇನೆ.

ನಗರ ಪಾಲಿಕೆಯ ಪರಿಮಿತಿಯಲ್ಲಿ ಪರವಾನಿಗೆ ಪಡೆದ ಹಾಗೂ ಪಡೆಯದ ಜಾಹಿರಾತುಗಳು.

107(891) ಶ್ರೀ ಎ.ಕೆ. ಅನಂತ ಕೃಷ್ಣ (ಶಿವಾಜಿನಗರ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಪರವಾನಗಿ ಪಡೆದ ಮತ್ತು ಪರವಾನಗಿ ಪಡೆಯದ ಎಲ್ಲ ವರ್ಗದ ಎಷ್ಟು ಸಂಖ್ಯೆಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲಾಗಿದೆ;

ಆ) ಪರವಾನಗಿಯ ನಿಯಮಗಳಂತೆ ಫಲಕಗಳನ್ನು ನೆಲೆಗೊಳಿಸಲಾಗಿದೆಯೇ;

ಇ) ಸದರಿ ಫಲಕಗಳು ಪಾದಚಾರಿ ಮತ್ತು ವಾಹನ ಸಂಚಾರಕ್ಕೆ ಅಪಾಯ ತಂದೊಡ್ಡುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ;

ಈ) 1990-91 ಮತ್ತು 91-92ನೇ ಸಾಲಿಗೆ ಫಲಕಗಳಿಗಾಗಿ ಪರವಾನಗಿ ನೀಡಿದ ಬಗ್ಗೆ ನಗರ ಪಾಲಿಕೆಯು ಪಡೆದ ಆದಾಯವೆಷ್ಟು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ)

	ಪರವಾನಗಿ ನೀಡಿರುವ ಫಲಕಗಳು	ಪರವಾನಗಿ ನೀಡದಿರುವ ಫಲಕಗಳು
1. ಹೋರ್ಡಿಂಗ್ಸ್ -	1360	54
2. ಅಂಗಡಿ ಜಾಹಿರಾತು ಫಲಕಗಳು -	9000	–
3. ಗೋಡೆ ಬರಹ -	125	–
4. ವಿದ್ಯುತ್ ಕಂಬಗಳ ಮೇಲೆ ಇರುವ ಕಿಯಾಸ್ಕ್‌ಗಳು ಕ.ವಿ.ಮ. ಅನುಮತಿ ನೀಡಿರುತ್ತಾರೆ. -	2200	–
5. ರಸ್ತೆ ಬದಿ ಇರುವ ಕಂಬಗಳ ಮೇಲೆ ಅಳವಡಿಸಿರುವ ಫಲಕಗಳ ಅನುಮತಿ ಅವಧಿ ಮುಗಿದಿರುತ್ತದೆ. -	4000	–